# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| | |
|---|---|
| | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,<br>ಬಿ.ಟಿ.ಎಂ.ಲೇಔಟ್ ಉಪ ವಿಭಾಗ,<br>16ನೇ ಮುಖ್ಯರಸ್ತೆ, ಬಿ.ಟಿ.ಎಂ.1ನೇ ಹಂತ,<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,<br>ಬೆಂಗಳೂರು-29, ದಿನಾಂಕ :02.09.2021 |

## ವಾರ್ಡ್ ಸಮಿತಿ ಸಭೆಯ ಸೂಚನಾ ಪತ್ರ

ವಿಷಯ:- ಸೆಪ್ಟಂಬರ್ 2021 ರ ಮಾಸಿಕ ವಾರ್ಡ್ ಸಮಿತಿ ಸಭೆಯನ್ನು ನಡೆಸುವ ಬಗ್ಗೆ.

ಉಲ್ಲೇಖ:- 1.ಘನ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: ಡಬ್ಲ್ಯೂಪಿ 24739/2012, ದಿನಾಂಕ: 10.11.2017

2.ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶ ಪತ್ರ ಸಂ: ಬಿ12(5)/ ಪಿ.ಆರ್/35/2020-21 ದಿನಾಂಕ: 21.09.2020

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶಗಳಂತೆ ಪ್ರತಿ ಮಾಹೇಯ 1ನೇ ಮುತ್ತು 3ನೇ ಶನಿವಾರ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಬೇಕಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಕ್ಷಿಣವಲಯದ ವಾರ್ಡ್ ಸಂಖ್ಯೆ 146 ಲಕ್ಕಸಂದ್ರ 16ನೇ ಅಡ್ಡರಸ್ತೆ, ಸಹಾಯಕ ಅಭಿಯಂತರು ರವರ ವಾರ್ಡ್ ಕಛೇರಿ ಬೆಂಗಳೂರು 560030 ಇಲ್ಲಿ ಸಭೆಯನ್ನು ದಿನಾಂಕ: 06.09.2021 ರ ಬೆಳಿಗ್ಗೆ 10:00 ಗಂಟೆಗೆ ನಿಗದಿಪಡಿಸಲಾಗಿದ್ದು, ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂ 146 ಲಕ್ಕಸಂದ್ರಕ್ಕೆ ಸಬಂಧಿಸಿದ ಅಧಿಕಾರಿಗಳು ಸಭೆಗೆ ತಪ್ಪದೇ ಹಾಜರಾಗಲು ಈ ಮೂಲಕ ಕೋರುತ್ತೇನೆ.

## ಸಭಾ ಅಜೆಂಡಾ

| | |
|---|---|
| 1) | ಹಿಂದಿನ ಸಭೆಯ ನಡುವಡಿಗಳನ್ನು ಓದಿ ರೆಕಾರ್ಡ್ ಮಾಡುವುದು |
| 2) | ವಾರ್ಡ್ ಸಮಿತಿಯನ್ನು ರಚಿಸುವ ಬಗ್ಗೆ. |
| 3) | ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ. |
| 4) | ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳ ಮತ್ತು ರಸ್ತೆಗುಂಡಿಗಳ ದುರಸ್ಥಿಪಡಿಸುವ ಬಗ್ಗೆ. |
| 5) | ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರ ವಿಷಯಗಳ ಬಗ್ಗೆ ಚರ್ಚೆ. |

ವಂದನೆಗಳೊಂದಿಗೆ,

2/9/2021

ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ: 146 ಲಕ್ಕಸಂದ್ರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರಿಗೆ,

1) ನೋಡಲ್ ಅಧಿಕಾರಿ ಹಾಗೂ ಮಾನ್ಯ ಅಧ್ಯಕ್ಷರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ) ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
3) ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ.ಅ ಬಿ.ಟಿ.ಎಂ) ವಿಭಾಗರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
4) ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಅಧಿಕಾರಿಗಳ ಮಾಹಿತಿಗಾಗಿ ಸಲ್ಲಿಸಿದೆ
5) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಉಪವಿಭಾಗ ಎಸ್-14ರವರ ಮಾಹಿತಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
6) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂಗಳೂರು ನೀರು ಸರಬರಾಜು ಮಂಡಳಿ ಉಪವಿಭಾಗ ರವರ ಮಾಹಿತಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
7) ತೋಟಗಾರಿಕೆ ಅಧೀಕ್ಷಕರು (ದಕ್ಷಿಣ) ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
8) ಆರೋಗ್ಯ ವೈದ್ಯಾಧಿಕಾರಿಗಳು / ಹಿರಿಯ ಆರೋಗ್ಯ ಪರಿವೀಕ್ಷಕರು/ ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಟಿ.ಎಂ ಲೇಔಟ್ ವಿಭಾಗದವರ ಮಾಹಿತಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
9) ಸಹಾಯಕ ಕಂದಾಯ ಅಧಿಕಾರಿಗಳು ಬಿ.ಟಿ.ಎಂ ಉಪವಿಭಾಗರವರ ಮಾಹಿತಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
10) ಸಹಾಯಕ ಕಾರ್ಯಪಾಲ ಅಭಿಯಂತರರು ವಿದ್ಯುತ್ ಉಪವಿಭಾಗ ದಕ್ಷಿಣ ವಲಯ ರವರ ಮಾಹಿತಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-146 ಲಕ್ಕಸಂದ್ರ ಕಛೇರಿಯಲ್ಲಿ ದಿನಾಂಕ: 06.09.2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ವಿಷಯ: ವಾರ್ಡ್ ಸಮಿತಿ ಸಭೆಯ ಬಗ್ಗೆ
ಉಲ್ಲೇಖ: ವಾರ್ಡ್ ಕಮಿಟಿ ನೋಡಲ್ ಅಧಿಕಾರಿಗಳುನ್ನು ನೇಮಿಸಿರುವ ಕಛೇರಿ ಆದೇಶ ಸಂಖ್ಯೆ ಬಿ12(5)ಪಿ.ಆರ್/35/20-21, ದಿನಾಂಕ: 16.04.2021

*****

. ಉಲ್ಲೇಖ(1) ರ ಸಭಾ ಸುಚನಾ ಪತ್ರದ ಅನುಸಾರ ದಿನಾಂಕ: 06.09.2021 ರಂದು ಲಕ್ಕಸಂದ್ರ ವಾರ್ಡ್ ಸಂ 146ರ ಕಾರ್ಯಲಯದಲ್ಲಿ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಯ ನಡವಳಿಗಳು

ಸಭೆಗೆ ಹಾಜರಿದ್ದ ಅಧಿಕಾರಿ/ಸದಸ್ಯರುಗಳ ವಿವರ

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ಯೋಗೇಶ್.ಕೆ.ಪಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ನೋಡಲ್ ಅಧಿಕಾರಿಗಳು | 9902083785 |
| 2 | ಶ್ರೀ.ನರೇಶ್‌ಕುಮಾರ್ ಕೆ ಸ.ಇಂ ವಾರ್ಡ್ 146 ಲಕ್ಕಸಂದ್ರ (ಪ್ರಭಾರ) | 9844407499 |
| 3 | ಶ್ರೀಮತಿ ರೂಪ ಹಿರಿಯ ಆರೋಗ್ಯಾಧಿಕಾರಿಗಳು | 9591399429 |
| 4 | ಶ್ರೀ ಸಂದೀಪ್ ವಿ ಕೆಲಸ ಪರಿವೀಕ್ಷಕರು | 9513342625 |
| 5 | ಶ್ರೀ.ವಿಜಯ್ ಕಿರಿಯ ಆರೋಗ್ಯಾಧಿಕಾರಿಗಳು | 9738721476 |
| 6 | ಶ್ರೀ ಪರಶುರಾಮ ಕೆ ಕಂದಾಯ ಪರಿವೀಕ್ಷಕರು | 9916666134 |
| 7 | ಶ್ರೀ ಮುಹೀಬುಲ್ಲಾ ಹೆಚ್.ಎಮ್ ಮೌಲ್ಯಮಾಪಕರು | 9886306562 |

* * * * * *

ದಿನಾಂಕ-06-09-2021 ರಂದು ಬೆಳಿಗ್ಗೆ 10.00 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅದ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

1. ಘನತ್ಯಾಜ್ಯ ನಿರ್ವಹಣೆ ಬಗ್ಗೆ.

ಸಭೆಗೆ ಹಾಜರಿದ್ದ, ಶ್ರೀ ವಿಜಯ್ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡಿ ಸಮರ್ಪಕವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ ಮಾಡುತ್ತಿದ್ದು, ಅನೇಕ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಮುಂದುವರೆದು ಒಣತ್ಯಾಜ್ಯ ಸಂಗ್ರಹಣ ಘಟಕದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತ್ಯಾಜ್ಯ ಸಂಗ್ರಹವಾಗಿದ್ದು, ಕೂಡಲೇ ತೆರವುಗೊಳಿಸಲು ಕೋರಿದರು. ಈ ಸಂಬಂಧ, ಸಂಬಂಧಿಸಿದ ಮೇಲ್ವಿಚಾರಕರಿಗೆ ತಿಳಿಸಲು ಕ್ರಮವಹಿಸಲಾಗುವುದೆಂದು ತಿಳಿಸಿದರು.

**ಕ್ರಮ:- ಈ ಬಗ್ಗೆ ಸಂಬಂಧ ಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಘ.ತ್ಯಾನಿ ರವರು ಕ್ರಮವಹಿಸುವಂತೆ ಸೂಚಿಸಿದರು.**



Scanned with CamScanner

ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 146 ರವರು ಮಾತನಾಡಿ ಸಮರ್ಪಕವಾಗಿ ಮುಖ್ಯರಸ್ತೆಗಳಲ್ಲಿ ಸರಿಯಾಗಿ ಕಸ ಗುಡುಸುತ್ತಿರುವುದಿಲ್ಲ ಹಾಗೂ ಕರ್ಬ್ ಪಕ್ಕದಲ್ಲಿ ಬಿದ್ದಿರುವ ಮಣ್ಣನ್ನು ಸಹ ತೆರವುಗೊಳಿಸುವುದಿಲ್ಲವೆಂದು ತಿಳಿಸಿದರು. ಈ ಬಗ್ಗೆ ಶ್ರೀ ವಿಜಯ್ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ದೂರಿನ ಬಗ್ಗೆ ಕೂಡಲೇ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.

2. ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ಬಗ್ಗೆ.

ಸಹಾಯಕ ಅಭಿಯಂತರರು ಮಾತನಾಡಿ, ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಒಳಚರಂಡಿ ಕೊಳುವೆ ಅಳವಡಿಸಲು ಅಗೆದಿರುವ ರಸ್ತೆಯನ್ನು ಯಥಾಸ್ಥಿತಿಗೆ ತರಲು ತಿಳಿಸಿದರು ಹಾಗೂ ಕೂಡಲೇ ರಸ್ತೆ ಗುಂಡಿಗಳನ್ನು ಮುಚ್ಚಲು ಮತ್ತು ಅನುಪಯುಕ್ತ ಮಣ್ಣನ್ನು ತೆರವುಗೊಳಿಸಲು ತಿಳಿಸಿದರು. ಈ ಬಗ್ಗೆ ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳ ಜೊತೆ ದೂರವಾಣಿ ಮುಖೇನ ಚರ್ಚಿಸಿ ಕ್ರಮವಹಿಸಲು ಕೋರಲಾಯಿತು ಹಾಗೂ ಈ ಬಗ್ಗೆ ಸದರಿ ಇಲಾಖೆಯವರಿಗೆ ಪತ್ರ ರವಾನಿಸಲಾಗಿದೆ ಎಂದು ವಾರ್ಡ್ ಅಭಿಯಂತರರು ತಿಳಿಸಿದರು.

3. ಕೋವಿಡ್ ನಿರ್ವಹಣೆ ಮಾಡುವಬಗ್ಗೆ.

ಸಭಾಧ್ಯಕ್ಷರು ಮಾತನಾಡಿ, ಮಾರ್ಷಲ್ ರವರಿಗೆ ಮಹಾಮಾರಿ ಕೊರೋನ ರೋಗ ಮೂರನೇ ಅಲೆ ಹರಡದಂತೆ ತಡೆಯಲು ಮುಂಜಾಗ್ರತ ಕ್ರಮವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಸಭೆ, ಸಮಾರಂಭಗಳು ನಡೆದರೆ ತಪಾಸಣೆ ಮಾಡಿ, ಪರವಾನಿಗೆ ಇಲ್ಲದಿದ್ದರೆ ಪರಿಶೀಲಿಸಿ ಅಂತಹ ಸಮಾರಂಭಗಳನ್ನು ಸ್ಥಗಿತಗೊಳಿಸತಕ್ಕದ್ದು, ಮತ್ತು ಕಡ್ಡಾಯವಾಗಿ ಮಾಸ್ಕ್ ದರಿಸುವುದು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಜಾಗೃತಿ ಮೂಡಿಸಬೇಕು ಹಾಗೂ ಮಾಸ್ಕ್ ದರಿಸದೇ ಇದ್ದವರಿಗೆ ದಂಡ ವಸೂಲಿ ಮಾಡಲು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸದಸ್ಯರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು

6/9/2021

ಕಾರ್ಯದರ್ಶಿಗಳು,
ವಾರ್ಡ್ ಸಂಖ್ಯೆ:146, ಲಕ್ಕಸಂದ್ರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ



Scanned with CamScanner